ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ

ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

☎ 08226-223160
08226-223170
Fax: 08226- 223180
E-mail: deo.cnagar@gmail.com

ಸಂಖ್ಯೆ: ಸಿಬ್ಬಂದಿ(1)ಸಿಆರ್202/2011-12

ದಿನಾಂಕ: 04-11-2020

## ಪತ್ರಿಕಾ ಪ್ರಕಟಣೆ

ವಿಷಯ: ಕಂದಾಯ ಇಲಾಖೆಯಲ್ಲಿ ಭೂಸ್ವಾಧೀನ ಹಾಗೂ ಇತರೆ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಜಿಲ್ಲಾಧಿಕಾರಿಗಳಿಗೆ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಕಂಇ 34 ಭೂಸ್ವಾಬೆ 2010, ದಿ:27-09-2010.
2) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಕಂಇ 34 ಭೂಸ್ವಾಬೆ 2010, ದಿನಾಂಕ:11-10-2012.

*****

ಕಂದಾಯ ಇಲಾಖೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಭೂಸ್ವಾಧೀನ ಹಾಗೂ ಇತರೆ ಪ್ರಕರಣಗಳಿಗೆ ಕಾನೂನಿನ ಸಲಹೆ ನೀಡಲು ಕಾನೂನು ಸಲಹೆಗಾರರ ಹುದ್ದೆಗಳನ್ನು ಸೃಜಿಸಲಾಗಿದ್ದು, ಈ ಹುದ್ದೆಗೆ ನಿವೃತ್ತ ಸಿವಿಲ್ ನ್ಯಾಯಾಧೀಶರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ಹಾಗೂ ಕಾನೂನು ಸಲಹೆಗಾರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958ರ ನಿಯಮ 313 (ಬಿ) ಪ್ರಕಾರ ಮಾಸಿಕ ಸಂಚಿತ ವೇತನವನ್ನು ನಿಗಧಿಗೊಳಿಸುವುದು ಎಂದು ಉಲ್ಲೇಖಿತ ಸರ್ಕಾರದ ನಡವಳಿಗಳಲ್ಲಿ ನಿರ್ದೇಶನ ನೀಡಿರುತ್ತಾರೆ.

ಸರ್ಕಾರದ ಆದೇಶದನ್ವಯ, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಹುದ್ದೆ | ಹುದ್ದೆ ಸಂಖ್ಯೆ |
|---|---|---|
| 1 | ಕಾನೂನು ಸಲಹೆಗಾರರು | 01 |

ಮೇಲೆ ವಿವರಿಸಲಾದ ಹುದ್ದೆಗೆ ಆಸಕ್ತಿ ಇರುವ ನಿವೃತ್ತ ಸಿವಿಲ್ ನ್ಯಾಯಾಧೀಶರು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ದಿನಾಂಕ: 20 -11-2020ರ ಒಳಗಾಗಿ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರಿಗೆ ಸಲ್ಲಿಸಬಹುದಾಗಿರುತ್ತದೆ.

(ಜಿ.ಕ.ಟಿ.ಆ.ಮೇ)

ಅಪರ ಜಿಲ್ಲಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಪ್ರತಿಯನ್ನು:

1. ಜಿಲ್ಲಾ ವಿಜ್ಞಾನ ಸೂಚನಾಧಿಕಾರಿ, ಎನ್.ಐ.ಸಿ ಜಿಲ್ಲಾ ಪಂಚಾಯತ್, ಚಾಮರಾಜನಗರ ರವರಿಗೆ ಕಳುಹಿಸುತ್ತಾ, ಸದರಿ ಪ್ರಕಟಣೆಯನ್ನು ಚಾಮರಾಜನಗರ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಅಗತ್ಯ ಕ್ರಮವಹಿಸಲು ಕೋರಿದೆ.
2. ಉಪ ವಿಭಾಗಾಧಿಕಾರಿ, ಕೊಳ್ಳೇಗಾಲ ಉಪ ವಿಭಾಗ, ಕೊಳ್ಳೇಗಾಲ ರವರಿಗೆ ಕಳುಹಿಸುತ್ತಾ ಕಛೇರಿ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಆಡಳಿತಾಧಿಕಾರಿಗಳು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ ರವರಿಗೆ ಕಳುಹಿಸುತ್ತಾ ಕಛೇರಿ ನಾಮಫಲಕದಲ್ಲಿ ಪ್ರಕಟಿಸಲು ಕೋರಿದೆ.

Recievd by
06/11/2020